12	ಭೂಗೋಳಶಾಸ್ತ್ರ	02
13	ಬಿಸಿನೆಸ್ ಮ್ಯಾನೆಜ್ಮೆಂಟ್	03
14	ವಾಣಿಜ್ಯಶಾಸ್ತ್ರ	114
15	ಭೌತಶಾಸ್ತ್ರ	41
16	ರಸಾಯನಶಾಸ್ತ್ರ	36
17	ಗಣಿತಶಾಸ್ತ್ರ	11
18	ಎಲೆಕ್ಟ್ರಾನಿಕ್ಸ್	06
19	ಗಣಕ ವಿಜ್ಞಾನ	04
20	ಸಂಖ್ಯಾಶಾಸ್ತ್ರ	04
21	ಸಸ್ಯಶಾಸ್ತ್ರ	13
22	ಪ್ರಾಣಿಶಾಸ್ತ್ರ	13
23	ರೇಶ್ಮೆಕೃಷಿ	05
24	ಭೂಗರ್ಭಶಾಸ್ತ್ರ	01
25	ಗೃಹ ವಿಜ್ಞಾನ	11
	ಒಟ್ಟು	746

ಬಲ್ಕ್‌ವೈಂಡಿಂಗ್ ಬೂತ್ಗಳಲ್ಲಿ ಕಲಬೆರಕೆಯನ್ನು ತಪ್ಪಿಸುವುದು

346-ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಜಿರಾದ್) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಲ್ಕ್ ವೆಂಡಿಂಗ್ ಬೂತ್ ನಂ. 315, 316, 317 ಮತ್ತು 318 ಗಳನ್ನು ಯಾವಾಗ ಪ್ರಾರಂಭಿಸಲಾಯಿತು. ಹಾಗೂ ಅದರ ರಿಯಾಯಿತಿದಾರರ ಹೆಸರು ವಿಳಾಸಗಳೇನು?

ಆ) ಆ ಬೂತುಗಳಲ್ಲಿ ಇದುವರೆವಿಗೆ ಎಷ್ಟು ಬಾರಿ ಕಲಬೆರಕೆ ಹಾಗೂ ಚೆಕ್ ಬೌನ್ಸಿಂಗ್ ಪ್ರಕರಣಗಳು ಪತ್ತೆಯಾಗಿವೆ; (ಬೂತುವಾರು ವಿವರಗಳನ್ನು ನೀಡುವುದು)

ಇ) ಕಲಬೆರಕೆ ಪ್ರಕರಣಗಳು ಪತ್ತೆಯಾದ ತಕ್ಷಣವೇ ಅಂತಹ ಬೂತುಗಳ ವಿಜೆನ್ಸಿಯನ್ನು ರದ್ದುಪಡಿಸುವ ಬಗ್ಗೆ (ಮೊದಲನೇ ಪ್ರಕರಣದಲ್ಲಿಯೇ) ದಿನಾಂಕ 11-1-93ರಂದು ನಡೆದ ಮಾತೃ ಡೈರಿಯ ವ್ಯವಸ್ಥಾಪಕ ಸಮಿತಿ ಸಭೆಯಲ್ಲಿ ತೀರ್ಮಾನ ಕೈಗೊಂಡಿರುವುದು ನಿಜವಲ್ಲವೇ?

ಈ) ಹಾಗಿದ್ದಲ್ಲಿ ನಿರಂತರವಾಗಿ ಕಲಬೆರಕೆ ಪ್ರಕರಣಗಳಲ್ಲಿ ತೊಡಗಿರುವ ಮೇಲ್ಕಂಡ ಬೂತುಗಳ ರಿಯಾಯಿತಿ ದಾರಿಕೆಯನ್ನು ಇದುವರೆವಿಗೂ ರದ್ದುಪಡಿಸದಿರಲು ಕಾರಣಗಳೇನು?

ಉ) ಮೇಲ್ಕಂಡ ಬೂತಿನ ರಿಯಾಯಿತಿದಾರರು ಮದರ್ ಡೈರಿ ನಿರ್ದೇಶಕರ ಹತ್ತಿರದ ಸಂಬಂಧಿಕರೆಂಬ ಒಂದೇ ಕಾರಣದಿಂದ ಈ ಬೂತುಗಳ ಸತತವಾಗಿ ಕಲಬೆರಕೆ ಪ್ರಕರಣಗಳಲ್ಲಿ ಸಿಲುಕಿದ್ದರೂ ಅವುಗಳ ವಿಜೆನ್ಸಿಯನ್ನು ರದ್ದುಪಡಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಊ) ಹಾಗಿದ್ದಲ್ಲಿ ಸರ್ಕಾರ ಕೂಡಲೇ ಕ್ರಮಕೈಗೊಂಡು ನಾಗರೀಕರಿಗೆ ಉತ್ತಮ ಹಾಲನ್ನು ನೀಡುವ ದೃಷ್ಟಿಯಿಂದ ಮೇಲ್ಕಂಡ ಎಲ್ಲಾ ಬೂತುಗಳ ರಿಯಾಯಿತಿದಾರರನ್ನು ಕೂಡಲೇ ಬದಲಾಯಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಅನುಬಂಧದಲ್ಲಿ ತೋರಿಸಲಾಗಿದೆ.

ಆ)

ಕನ್ಷೆಷನರುಗಳ ಹೆಸರು	ಬೂತ್ ಸಂಖ್ಯೆ	ಕಲಬೆರಕೆ	ಚಿಕ್-ಪೌನ್ಸ್
-	315	06	08
ದೇವಪುತ್ರ	316	11	40
ಬಿ.ಆರ್. ಉಮೇಶ್	316	-	-
-	317	03	43
ವಿ. ಗೋವಿಂದರಾಜು	318	10	142
ಎಸ್.ಸಿ. ಧನಂಜಯ	318	02	19
ಕೆ. ನಟರಾಜ	318	-	-

ಇ) ಹೌದು.

ಈ) ಈಗಾಗಲೇ 316 ಮತ್ತು 318ರ ಇಬ್ಬರು ರಿಯಾಯಿತಿದಾರರನ್ನು ವಜಾ ಮಾಡಿಲಾಗಿದೆ.

ಉ) ಇಲ್ಲ ಈ ಬೂತುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ರಿಯಾಯಿತಿದಾರರು ನಿರ್ದೇಶಕರ ಸಂಬಂಧಿಕರಲ್ಲ.

ಊ) ಈಗಾಗಲೇ 316 ಮತ್ತು 318ರ ಬೂತುಗಳ ರಿಯಾಯಿತಿದಾರಿಕೆಯನ್ನು ಬದಲಾಯಿಸಲಾಗಿದೆ. ಕಲಬೆರಕೆ ಮತ್ತು ಇತರೆ ಪ್ರಕರಣಗಳು ಖಚಿತವಾದಲ್ಲಿ ನಿಯಮಾವಳಿ ಪ್ರಕಾರ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ಜರುಗಿಸಲಾಗುವುದು.

ಅನುಬಂಧ

ಬಲ್ಕ್ ವೆಂಡಿಂಗ್ ಬೂತ್ ಸಂಖ್ಯೆ : 315, 316, 317 ಮತ್ತು 318ರ ಕನ್ಸೇಷನರ್ಗಳ ಹೆಸರು ಮತ್ತು ವಿಳಾಸ

ಹೆಸರು ಮತ್ತು ವಿಳಾಸ ಶ್ರೀಯುತರಾದ	ಬೂತ್ ಸಂಖ್ಯೆ	ಪ್ರಾರಂಭಿಸಿದ ದಿನಾಂಕ	ಷರಾ
1. ಟಿ. ನಾಗರಾಜು ನಂ.ಪಿ.-68, 3ನೇ ಅಡ್ಡರಸ್ತೆ ನಾಗಪ್ಪಬ್ಲಾಕ್, ಬೆಂಗಳೂರು-21.	315	12-3-86	-
2. ದೇವಪುತ್ರ, ನಂ. 48, 2ನೇ ಅಡ್ಡರಸ್ತೆ, ಭಾಷ್ಯಂನಗರ, ಶ್ರೀರಾಮಪುರ, ಬೆಂಗಳೂರು-21.	316	12-3-86	ರಿಯಾಯಿತಿದಾರಿಕೆಯನ್ನು ದಿನಾಂಕ: 9-4-93 ರಂದು ರದ್ದು ಪಡಿಸಲಾಗಿದೆ.
3. ಬಿ.ಆರ್. ಉಮೇಶ ತಂದೆ ಎನ್. ರಾಮು, ನಂ. 70. 2ನೇ ಅಡ್ಡರಸ್ತೆ, ಶ್ರೀರಾಮಪುರ, ಬೆಂಗಳೂರು-21	316		ದಿನಾಂಕ 30-6-93 ರಂದು ಬೂತನ್ನು ಇವರ ವಶಕ್ಕೆ ನೀಡಲಾಗಿದೆ.

4.	ಟಿ.ಆರ್. ಚಂದ್ರಶೇಖರ್ ಜೆ-39, 3ನೇ ಅಡ್ಡರಸ್ತೆ, ಒಂದನೇ ಮುಖ್ಯರಸ್ತೆ, ಲಕ್ಷ್ಮೀನಾರಾಯಣಪುರ, ಬೆಂಗಳೂರು-21.	317	25-5-86	
5.	ವಿ. ಗೋವಿಂದರಾಜು, ನಂ: 41, ಎ.ಡಿ. ಬ್ಲಾಕ್ 4ನೇ ಮುಖ್ಯರಸ್ತೆ ಶ್ರೀರಾಮಪುರ, ಬೆಂಗಳೂರು-21.	318	9-1-87	ಕಲಬೆರಕೆ ಕಾರಣಗಳಿಗೆ ದಿನಾಂಕ 13-3-93 ರಂದು ರಿಯಾಯಿತಿ ದಾರಿಕೆಯನ್ನು ರದ್ದು ಪಡಿಸಲಾಗಿದೆ.
6.	ಎಸ್.ಸಿ. ಧನಂಜಯ, 30:1, 4ನೇ ಕ್ರಾಸ್, ಹೊಸಹಳ್ಳಿ, ಪೈಪ್‌ಲೈನ್, ಮಾಗಡಿರೋಡ್ (ಅಂಚೆ) ಬೆಂಗಳೂರು-23.	318		ದಿನಾಂಕ 13-3-93 ರಂದು ಬೂತನ್ನು ವಹಿಸಿಕೊಡಲಾಯಿತು. ಕಲಬೆರಕೆ ಕಾರಣ ಗಳಿಗಾಗಿ ದಿನಾಂಕ: 31-1-94ರಂದು ರಿಯಾಯಿತಿದಾರಿಕೆ ಯನ್ನು ರದ್ದು ಪಡಿಸಲಾಗಿದೆ.
7.	ಕೆ. ನಟರಾಜ್, ತಂದೆ, ಬಿ. ಕೆಂಪಯ್ಯ, 1721;8, 3ನೇ ಮುಖ್ಯರಸ್ತೆ ರಾಮಮೋಹನಪುರ, ಶ್ರೀರಾಮಪುರ, ಬೆಂಗಳೂರು-21.	318		ದಿನಾಂಕ:31-1-94 ರಂದು ಬೂತನ್ನು ವಹಿಸಲಾಗಿದೆ.

ಬೆಳಗಾಂ ತಾಲ್ಲೂಕು ಸೂಳೇಭಾವಿ ಮತ್ತು ಬಾಡಾ ಗ್ರಾಮಗಳಿಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು

375-ಶ್ರೀ ಕೆ. ಮೂಡಗೇಕರ್ ದೇಸಾಯಿ (ಬಾಗೇವಾಡಿ); ಮಾನ್ಯ ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ತಾಲ್ಲೂಕು,ಸೂಳೇಭಾವಿ ಮತ್ತು ಬಾಡಾ ಗ್ರಾಮಗಳಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಗ್ರಾಮಾಂತರ ಪ್ರದೇಶಗಳ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬೆಳಗಾಂ ತಾಲ್ಲೂಕಿನ ಈ ಗ್ರಾಮಗಳಿಗೆ 1994-95ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರವು ತಕ್ಷಣ ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್. ಎಂ. ಯಾಹ್ಯಾ (ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು):

ಅ) ಬಂದಿದೆ.